ಚಳ್ಳಕೆರೆ ಜೆಎಂಎಫ್‌ಸಿ ನ್ಯಾಯಾಲಯದ ವ್ಯಾಪ್ತಿ ಬದಲಾವಣೆಗಳು

1238 (1650) ಶ್ರೀ ಬಸವರಾಜ್ ಮಂಡಿಮಠ್ ಜಿ. (ಚಳ್ಳಕೆರೆ) : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ಜೆ ಎಂ ಎಫ್ ಸಿ ವ್ಯಾಪ್ತಿಯಿಂದ ತಳಕು ಹೋಬಳಿಯ 40 ಗ್ರಾಮಗಳನ್ನು ಸುಮಾರು 55 ಕಿ.ಮೀ. ದೂರದ ಮೊಳಕಾಲ್ಮೂರು ಜೆಎಂಎಫ್‌ಸಿ ವ್ಯಾಪ್ತಿಗೆ ವರ್ಗಾಯಿಸಿರುವುದು ನಿಜವೆ?

ಆ) ವರ್ಗಾಯಿಸಿದ ಗ್ರಾಮಗಳಲ್ಲಿ ಸುಮಾರು ಅರ್ಧದಷ್ಟು ಗ್ರಾಮಗಳು ಮೊಳಕಾಲ್ಮೂರು ಪಟ್ಟಣದಿಂದ ಸುಮಾರು 100 ಕಿ.ಮೀ ದೂರದವರೆಗೆ ಇದ್ದು: ಸದರಿ ಗ್ರಾಮಗಳ ಕಕ್ಷಿದಾರರಿಗೆ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಸದರಿ ಗ್ರಾಮಗಳನ್ನು ಚಳ್ಳಕೆರೆ ಜೆಎಂಎಫ್‌ಸಿ ವ್ಯಾಪ್ತಿಗೆ ಪುನರ್ ವಾಪಸ್ ತರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :

ಅ) ಹೌದು.

ಆ) ಹೌದು.

ಇ) ಚಳ್ಳಕೆರೆ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ೪೦ ಹಳ್ಳಿಗಳನ್ನು ಮೊಳಕಾಲ್ಮೂರು ನ್ಯಾಯಾಲಯದ ವ್ಯಾಪ್ತಿಗೆ ಸೇರಿಸುವ ಅಧಿಸೂಚನೆ ದಿನಾಂಕ:೨೩-೧೦-೯೯, ಇದನ್ನು ಸರ್ಕಾರ ಹೊರಡಿಸಿತ್ತು. ನಂತರ ಚಳ್ಳಕೆರೆಯ ವಿವಿಧ ಸಂಘ, ಸಂಸ್ಥೆಗಳ ಮನವಿಗಳನ್ನು ಪರಿಶೀಲಿಸಿ, ಸರ್ಕಾರದ ಅಧಿಸೂಚನೆಯನ್ನು ತಡೆ ಹಿಡಿದು, ಈ ಮೊದಲು ಚಾಲ್ತಿಯಲ್ಲಿದ್ದ ವ್ಯವಸ್ಥೆಯನ್ನು ಮುಂದುವರಿಸುವ ಬಗ್ಗೆ ಉಚ್ಚ ನ್ಯಾಯಾಲಯದ ಅಭಿಪ್ರಾಯ :ಸಹಮತಿಯನ್ನು ಕೋರಲಾಗಿದೆ. ಉಚ್ಚ ನ್ಯಾಯಾಲಯದಿಂದ ಸಹಮತಿ: ಅಭಿಪ್ರಾಯ ಬಂದ ಕೂಡಲೇ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾವಾರು ಪ್ರವಾಸಿ ನಿವಾಸದ ವಿವರ

1239 (1490) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಇಲಾಖೆಯ ನಡೆಸುತ್ತಿರುವ ಪ್ರವಾಸಿ ನಿವಾಸಗಳು ಯಾವುವು? ಮತ್ತು ಅವು ಎಲ್ಲೆಲ್ಲಿ ಇದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಸಾರ್ವಜನಿಕರಿಗೆ ಉತ್ತಮ ಸೌಲಭ್ಯ ಒದಗಿಸುತ್ತಿರುವ ಪ್ರವಾಸಿ ನಿವಾಸಗಳು ಯಾವುವು?

ಇ) ಸದರಿ ಪ್ರವಾಸಿ ನಿವಾಸಗಳಲ್ಲಿ ವಿಧಿಸಲಾಗಿರುವ ದಿನದ ಬಾಡಿಗೆಯ ದರ ಮತ್ತು ಇತರ ದರಗಳು ಎಷ್ಟೆಷ್ಟು?

ಈ) ರಾಜ್ಯದಲ್ಲಿ ಪ್ರವಾಸಿ ನಿವಾಸಗಳನ್ನು ಅಭಿವೃದ್ಧಿ ಪಡಿಸಲು ಅದಕ್ಕೆ ಆಯ್ಕೆ ಮಾಡಿದ ಸ್ಥಳಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಡೆಸುತ್ತಿರುವ ಪ್ರವಾಸಿ ಗೃಹಗಳು ಹಾಗೂ ಅವುಗಳು ಇರುವ ಸ್ಥಳಗಳ ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಆ) ಸೌಲಭ್ಯ ಉನ್ನತೀಕರಣ ಕೆಲಸ ನಡೆಯುತ್ತಿರುವ ಗುಲ್ಬರ್ಗ, ಬಿಜಾಪುರ, ಟಿ.ಬಿ. ಡ್ಯಾಂ, ಹೊರತುಪಡಿಸಿಂತೆ ಉಳಿದ ಘಟಕಗಳಲ್ಲಿ ವಾಸ್ತವ್ಯ ವ್ಯವಸ್ಥೆ ತೃಪ್ತಿಕರವಾಗಿದೆ.

ಇ) ಸದರಿ ಪ್ರವಾಸಿ ನಿವಾಸಗಳಲ್ಲಿ ವಿಧಿಸಲಾಗಿರುವ ದಿನದ ಬಾಡಿಗೆಯ ದರ ಮತ್ತು ಇತರೆ ದರಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಈ) ಭಾರತ ಸರ್ಕಾರದ ನೆರವಿನೊಂದಿಗೆ ಹೋಟೆಲ್ ಮಯೂರ್ ಬಹಮನಿ, ಗುಲ್ಬರ್ಗ, ಹೋಟೇಲ್ ಮಯೂರ ಬಾರಿದ್ ಶಾಹೀ, ಬೀದರ್, ಹೋಟೆಲ್ ಮಯೂರ ವಿಜಯನಗರ, ಟಿ.ಬಿ. ಡ್ಯಾಂ ಹಾಗೂ ಹೋಟೆಲ್ ಮಯೂರು ಗೇರುಸೊಪ್ಪ ಜೋಗ್ ಫಾಲ್ಸ್, ಇವುಗಳನ್ನು ಉನ್ನತೀಕರಣಗೊಳಿಸಲಾಗಿದೆ.

ಹೋಟೇಲ್ ಮಯೂರು ಹೊಯ್ಸಳ, ಹೋಟೆಲ್ ಮಯೂರ ರಿವರ್ ವ್ಯೂ, ಶ್ರೀರಂಗಪಟ್ಟಣ ಮತ್ತು ಹೋಟೆಲ್ ಮಯೂರ ಗೇರುಸೊಪ್ಪ ಈ ಘಟಕಗಳಲ್ಲಿ ಭಾರತ ಸರ್ಕಾರದ ನೆರವಿನೊಂದಿಗೆ ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಕರ್ನಾಟಕ ಸರ್ಕಾರದ ನೆರವಿನೊಂದಿಗೆ ಹೋಟೇಲ್ ಮಯೂರ ವ್ಯಾಲಿ ವ್ಯೂ, ಮಡಿಕೇರಿ, ಉನ್ನತೀಕರಣ, ಹೋಟೆಲ್ ಮಯೂರ ರಿವರ್ ವ್ಯೂ, ಶ್ರೀರಂಗಪಟ್ಟಣ, ಹೋಟೆಲ್ ಮಯೂರ ಪೈನ್ ಟಾಪ್, ನಂದಿಬೆಟ್ಟ ಹಾಗೂ ಮಯೂರ ನಿಸರ್ಗ, ಮುತ್ಯಾಲಮಡುವು, ಈ ಘಟಕಗಳಲ್ಲಿ ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ANNEXURE - I

1)	Bidar District	- Hotel Mayura Barid Shahi, Bidar.
2)	Belgaum District	- Hotel Mayura Malaprabha, Belgaum.
3)	Bagalkot District	- Hotel Mayura Chalukya, Badami.
4)	Bijapur District	- Hotel Mayura Adial Shahi, Bijapur.
5)	Gulbarga District	- Hotel Mayura Bahamani, Gulbarga.
6)	Bellary District	- Hotel Mayura Vijayanagar, Tungabhadra Dam,
		Hotel Mayura Bhauvaneswari, Kamalapur.

7)	Mangalore	- Hotel Mayura Nethravathi, Mangalore.
8)	Karwar	- Hotel Mayura Samudra, Gokarna.
9)	Shimoga District	- Hotel Mayura gerusoppa, Jog Falls.
10)	Uttara Kannada District	- Hotel Mayura Sagara Darshini Kiosk, Murdeswar.
11)	Hassan District	- Hotel Mayura Velapuri, Belur, Hotel Mayura Shanthala, Halebeedu.
12)	Kodagu District	- Hotel Mayura Valley View, Madikeri.
13)	Mysore District	- Hotel Mayura Hoysala, Mysore, Hotel Mayura Yatri Nivas, Mysore, Hotel Mayura Rhino, Zoo Gardan,Mysore, Hotel Mayura Manasatarangini, Mysore, Hotel Mayura Prakruthi, Melkamanahalli.
14)	Mandya District	- Hotel Mayura Cauvery, K.R. Sagar, Hotel Mayura River View, Srirangapatna, Hotel Mayura Highway Restaurant, Maddur.
15)	Bangalore District	- Hotel Mayura Big Banyan Tree Rest, Ramohalli, Hotel Mayura Vanashree Rest ,Banner-ghatta, Hotel Mayura Nisarga Rest,Muthyala-maduvu, Hotel Mayura Bal Bhavan Kiosk, Bangalore, Hotel Mayura Ulsoor Lake Boat Club, Bangalore, Hotel Mayura Sankey Boat Club, Bangalore.

16)	Tumkur District	- Hotel Mayura Pavithra, Nandi Hills, Hotel Mayura Apoorva, Mulbagal.
OUTSIDE THE STATE :		
1)	Ooty	- Hotel Mayura Sudarshan, Ooty, Tamilnadu.
2)	Tirumala	- Hotel Mayura Sapthagiri, Tirumala, Andhrapradesh.

ANNEXURE - II

Hotal Mayura Chalukya :

1) BADAMI - Single - Rs.160/- Double - Rs.190/-
3 Bedded- Rs.250/- 5 Bedded - Rs.350/-

Hotel Mayura Malaprabha:

2) BELGAUM - Single - Rs.160/- Double - Rs.190/-
3 Dormitories with 10 Double Beds Each Rs.40/- per head.

3) Hotel Mayura Velapuri, Belur:
Single - Rs.135/- (Old Wing) Double Rs.155/- (Old Wing)
Single -Rs.160/- (New Wing) Double Rs.190/- (New Wing)

4) Hotel Mayura Barid Shahi, Bidar:

Single - Rs.100/- Double - Rs.125/-

5) Hotel Mayrua Adil Shahi, Bijapur :

Single - Rs.135/- Double (Ordinary)Rs.155/- Dpuble (Deluxe) -Rs.175/-
3 Bedded - Rs.210/-

(A/C) - Single - Rs.440/-, Double - Rs.440/-

6) Hotel Mayura Meghadoota, Devarayanadurga, Tumkur District:
Double -Rs.100/-

7) Hotel Mayura Samudra, Gokarna:
Single -Rs.105/-, Double -Rs.135/- , 4 Bedded -Rs.250/-

8) Hotel Mayura Bahamani, Gulbarga :
Bar and Restaurant

9) Hotel Mayura Shantala, Halebidu:
Single -Rs.100/- Double- Rs.150/- 4 Bedded - Rs.250/-

10) Hotel Mayura Gerusoppa , Jog Falls:
Single -Rs.150/-, Double -Rs.200/-, (Deluxe) -Rs.3000/-

11) Hotel Mayura Bhuvaneshwari, Kamalapur (Hampi):
Single -Rs.250/-, Double -Rs.300/-
A/C Single - Rs.400/- A/C. Double - Rs.450/-

12) Hotel Mayura Cauvery, K.R. Sagar :
Single - Rs.135/-, Double - Rs.200/-

13) Hotel Mayura Valley View, Madikeri :
Single -Rs.300/-, Double - Rs.400/- Suite- Rs.500/-
(Season -16th September to 14th June)

Single - 275/-, Double -330/-, Suite - Rs.500/-
(Off Season -15h June to 15th September).

14) Hotel Mayura Netravati, Mangalore:
Single - Rs. 105/-, Double - Rs.135/-
1 Dormitory with 10 Beds - Rs. 45/- per head.

15) Hotel Mayura Prakruti, Melkamanahalli:
Season - April - June, October -December
Single - Rs.300/-, Double - Rs.400/-

Off Season :
Single - Rs.300/-, Double - Rs.350/-

16) Hotel Mayura Apoorva, Mulbagal:
Single - Rs. 160/-, Double - Rs.220/-

17) Hotel Mayura Hoysala, Mysore :
(Economy) Single - Rs.250/-, Double - Rs.300/-
(Executive) Single - Rs.350/-, Double - Rs.400/-
Suite (A/C with TV) - Rs. 700/-
(Double) -Rs. 700/- Suite - Rs.800/-

18) Hotel Mayura Yatri Nivas, Mysore:

Single- Rs.200/- Double- Rs.240/-
4 Bedded (6 Nos.) - Rs.350/- 6 Bedded (1No.) - RS.500/-
8 Bedded (2 Nos.) - Rs.550/-
1 Dormitory with 16 Beds- Rs.70/- per head.
1 Dormitory with 20 Beds- Rs.70/- per head.

19) Hotel Mayura Pine Top, Nandi Hills:

Single - Rs. 190/-, Double - Rs.220/-
Conference Room Tariff - Rs.700/- per day.

20) Hotel Mayura Sudarshan, Ooty:

Season- 1st April to 30the June: Single -Rs.325, Double - Rs.500/-
Single Suite- Rs.650/-, Double Suite - Rs.800/-
Off Season - 1st July to 31st March - Single - Rs.275/- Double Rs.375/-
Single Suite - Rs.450/-, Double Suite - Rs.650/-

21) Hotel Mayura River View, Srirangapatna:

Season - April to June, October, December and January)
Double Bed- Rs.500/-
Cottage Nos. 7 & 8 - Double Bed- Rs.450/-
Off Season - July, August, September, November, February & March)
Double Bed - Rs.350/-
Cottage Nos. 7 &8: Double Bed - Rs.300/-

22) Hotel Mayura Vijayanagar, T.B. Dam:

Single - Rs.125/- Double - 160/-
3 Bedded - Rs.190/-

23) Hotel Mayura Saptagiri, Tirumala, Andhra Pradesh:

Double - Rs.150/-

24) Hotel Mayura Pavitra, Yediyur:

Single - Rs.130/- Double - Rs.160/-

ರಾಜ್ಯದಲ್ಲಿ ವೆಟರಿನರಿ ವಿಶ್ವವಿದ್ಯಾಲಯದ ಅವಶ್ಯಕತೆ

1240 (1491) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ;

ಆ) ರಾಜ್ಯದಲ್ಲಿರುವ ವೆಟರಿನರಿ ಕಾಲೇಜುಗಳ ಸಂಖ್ಯೆ ಎಷ್ಟು;

ಇ) ರಾಜ್ಯಕ್ಕೆ ಅವಶ್ಯಕವಾಗಿ ಬೇಕಾಗಿರುವ ವೆಟರಿನರಿ ಕಾಲೇಜುಗಳ ಸಂಖ್ಯೆ ಎಷ್ಟು ; ಕೇಂದ್ರಗಳನ್ನು ಸ್ಥಾಪಿಸಲಾಗುವುದೆ;

ಈ) ರಾಜ್ಯದಲ್ಲಿ ವೆಟರಿನರಿ ವಿಶ್ವವಿದ್ಯಾಲಯದ ಅವಶ್ಯಕತೆಯಿದ್ದು ಅದನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೆ;

ಉ) ರಾಜ್ಯದಲ್ಲಿ ಪ್ರತಿವರ್ಷ ಉತ್ತೀರ್ಣರಾಗುವ ವೆಟರಿನರಿ ಡಾಕ್ಟರುಗಳ ಸಂಖ್ಯೆ ಎಷ್ಟು;

ಊ) ರಾಜ್ಯದಲ್ಲಿರುವ ಜಾನುವಾರು ಸಂಖ್ಯೆಗೆ ಅನುಗುಣವಾಗಿ ಬೇಕಾದ ಡಾಕ್ಟರರ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) 286.51 ಲಕ್ಷಗಳು

ಆ) 2

ಇ) ಸದ್ಯಕ್ಕೆ ಹೆಚ್ಚಿನ ಪಶು ವೈದ್ಯಕೀಯ ಕಾಲೇಜುಗಳ ಅವಶ್ಯಕತೆ ಇರುವುದಿಲ್ಲ.